**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ.4/2018**

ಅ.ಸಾ ಃ 2
ದೋಸಾ ಃ 2

ದಿನಾಂಕಃ**05/09/2024** ರಂದು ಸಾಕ್ಷಿ ಅಸಾ-**2** ರವರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

16. ಲಂಚದ ಹಣದ ನೋಟುಗಳ ವಿವರಗಳನ್ನು ಹಾಳೆಗಳಲ್ಲಿ ಬರೆದು ನನ್ನ ಸಹಿ ಪಡೆದಿರುತ್ತಾರೆ ಎಂದು ಸೂಚಿಸುವುದು ನಿಜ. ಅದನ್ನು ನಿಪಿ-8 ಅಂತಾ, ಸಾಕ್ಷಿ ಸಹಿ ನಿಪಿ-8 ಕ್ಕೆ ನಿಪಿ-8(ಎ) ಅಂತಾ ಗುರುತಿಸಲಾಯಿತು. ಎಸಿಬಿ ಕಛೇರಿಯಲ್ಲಿ ಆರೋಪಿ ಮತ್ತು ಚಾಸಾ-1 ಮಾತನಾಡಿದ ಧ್ವನಿ ಸಂಗ್ರಹ ಇರುವ ಸಿಡಿಯನ್ನು ನನಗೆ ಹಾಕಿ ಕೇಳಿಸಿದರು ಎಂದು ಸೂಚಿಸುವುದು ನಿಜ. ಟ್ರ್ಯಾಪ್ ಪಂಚನಾಮೆ ಕಾಲಕ್ಕೆ ಹತ್ತಿಯಿಂದ ಸ್ಥಳ ಒರೆಸಿ ದ್ರಾವಣದಲ್ಲಿ ಅದ್ದಿ ಜಪ್ತಿಮಾಡಲಾಯಿತು ಎಂದು ಸೂಚಿಸುವುದು ನಿಜ. ಸದರಿ ಹತ್ತಿಯ ಭಾಗವನ್ನು ಮಾದರಿಗಾಗಿ ಪಂಚನಾಮೆಯ ಅಡಿಯಲ್ಲಿ ಜಪ್ತಿ ಮಾಡಲಾಯಿತು ಎಂದು ಸೂಚಿಸುವುದು ನಿಜ.

(ತನಿಖಾಧಿಕಾರಿ ಸೀಲು ಮಾಡಿದ ವಸ್ತುವನ್ನು ಹಾಜರುಪಡಿಸಿದ್ದು, ಅದನ್ನು ಮಾನ್ಯ ವಿಸಅ ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ಸೀಲು ಓಪನ್ ಮಾಡಲಾಯಿತು.)

17. ಸದರಿ ಹತ್ತಿಯನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುಮಾ-7 ಅಂತಾ ಗುರುತಿಸಲಾಯಿತು. ಟ್ರ್ಯಾಪ್ ಪಂಚನಾಮೆ ಕಾಲಕ್ಕೆ ಟೇಬಲ್ ಮೇಲಿಟ್ಟ ಜಾಗೆಯನ್ನು ಒರೆಸಿದ ಹತ್ತಿಯನ್ನು ಕೂಡ ದ್ರಾವಣದಲ್ಲಿ ಅದ್ದಿ ಜಪ್ತಿ ಮಾಡಲಾಯಿತು ಎಂದು ಸೂಚಿಸುವುದು ನಿಜ. ಸದರಿ ಹತ್ತಿಯ ಭಾಗವನ್ನು ಪಂಚನಾಮೆಯ ಅಡಿಯಲ್ಲಿ ಜಪ್ತಿ ಮಾಡಲಾಯಿತು ಎಂದು ಸೂಚಿಸುವುದು ನಿಜ.

(ತನಿಖಾಧಿಕಾರಿ ಸೀಲು ಮಾಡಿದ ವಸ್ತುವನ್ನು ಹಾಜರುಪಡಿಸಿದ್ದು, ಅದನ್ನು ಮಾನ್ಯ ವಿಸಅ ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ಸೀಲು ಓಪನ್ ಮಾಡಲಾಯಿತು.)

18. ಸದರಿ ಹತ್ತಿಯನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುಮಾ-8 ಅಂತಾ ಗುರುತಿಸಲಾಯಿತು. (ಮುಮಾ-8 ಸ್ವಲ್ಪ ಗುಲಾಬಿ ಬಣ್ಣ ಕಾಣಿಸಿರುವುದನ್ನು ಗುರುತಿಸಿರುತ್ತಾರೆ.) ಲೋಕಾಯುಕ್ತ ಪೊಲೀಸರು ಟೇಬಲ್ ಮೇಲೆ ಪ್ಲಾಸ್ಟಿಕ್ ಹ್ಯಾಂಡ ಕವರನ್ನು ಪಂಚನಾಮೆಯ ಅಡಿಯಲ್ಲಿ ಜಪ್ತಿಮಾಡಿದರು ಎಂದು ಸೂಚಿಸುವುದು ನಿಜ.

(ತನಿಖಾಧಿಕಾರಿ ಸೀಲು ಮಾಡಿದ ವಸ್ತುವನ್ನು ಹಾಜರುಪಡಿಸಿದ್ದು, ಅದನ್ನು ಮಾನ್ಯ ವಿಸಅ ಮತ್ತು ಆರೋಪಿತರ ಪರ ವಕೀಲರ ಸಮಕ್ಷಮ ಸೀಲು ಓಪನ್ ಮಾಡಲಾಯಿತು.)

19. ಸದರಿ ಪ್ಲಾಸ್ಟಿಕ್ ಬ್ಯಾಗನ್ನು ತೆರೆದು ಸಾಕ್ಷಿಗೆ ತೋರಿಸಲಾಗಿ, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುಮಾ-9 ಅಂತಾ ಗುರುತಿಸಲಾಯಿತು. ಆರೋಪಿ ಮತ್ತು ಚಾಸಾ-1 ರವರ ನಡುವೆ ವಹಿಸುವಿಕೆ ಪಂಚನಾಮೆಯಲ್ಲಿ ಸಂಭಾಷಣೆಯನ್ನು ಸಂಗ್ರಹಿಸಿದ್ದು, ಡಿವಿಡಿಗೆ ವರ್ಗಾಯಿಸಿದರು ಎಂದು ಸೂಚಿಸುವುದು ನಿಜ.

(ತನಿಖಾಧಿಕಾರಿ ಸೀಲು ಮಾಡಿದ ಸಿಡಿ ಹಾಜರುಪಡಿಸಿದ್ದು, ಅದನ್ನು ಮಾನ್ಯ ವಿಸಅ ಮತ್ತು ಆರೋಪಿ ಪರ ವಕೀಲರ ಸಮಕ್ಷಮ ಸೀಲು ಓಪನ್ ಮಾಡಿ ಲೋಕಾಯುಕ್ತ ಕಛೇರಿಯಿಂದ ತಂದ ಲ್ಯಾಪಟ್ಯಾಪ ಮುಖಾಂತರ ಪ್ಲೇ ಮಾಡಲಾಯಿತು.)

20. ಡಿವಿಡಿಯನ್ನು ಲ್ಯಾಪಟ್ಯಾಪನಲ್ಲಿ ಹಾಕಿ ಪ್ಲೇ ಮಾಡಿ ಸಾಕ್ಷಿಗೆ ಸಂಭಾಷಣೆಯನ್ನು ಕೇಳಿಸಿದಾಗ, ಸಾಕ್ಷಿ ಶಿವಾನಂದ ಪಾಟೀಲ ಮತ್ತು ಚಾಸಾ-1 ರವರ ಸಂಭಾಷಣೆಯನ್ನು ಕೇಳಿ ಗುರುತಿಸಿದ್ದು, ಅದನ್ನು ನಿಪಿ-9 ಅಂತಾ ಗುರುತಿಸಲಾಯಿತು. ಟೇಬಲ್ ಮೇಲೆ ಹತ್ತಿಯಿಂದ ಒರೆಸಿ ಅದನ್ನು ದ್ರಾವಣದಲ್ಲಿ ಅದ್ದಿದಾಗ, ಆ ದ್ರಾವಣ ಗುಲಾಬಿ ಬಣ್ಣಕ್ಕೆ ಪರಿವರ್ತನೆಯಾಯಿತು, ಅದನ್ನು ಕೂಡ ಬಾಟಲನಲ್ಲಿ ಹಾಕಿ ಸೀಲು ಮಾಡಿ ಜಪ್ತಿಮಾಡಿದರು ಎಂದು ಸೂಚಿಸುವುದು ನಿಜ. ಸದರಿ ದ್ರಾವಣದ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುಮಾ-10 ಅಂತಾ ಗುರುತಿಸಲಾಯಿತು. ಸ್ಥಳದಲ್ಲಿ ಲೋಕಾಯುಕ್ತ ಪೊಲೀಸರು ಚಾಸಾ-7 ರವರನ್ನು ಕರೆಯಿಸಿ ನಕಾಶೆಯನ್ನು ನಮ್ಮ ಸಮಕ್ಷಮ ಸ್ಥಳದಲ್ಲಿ ತಯಾರಿಸಿದರು ಎಂದು ಸೂಚಿಸುವುದು ನಿಜ.

(ಮುಂದುವರೆದ ಹೆಚ್ಚಿನ ಪಾಟೀ ಸವಾಲಿಗೆ ಮಾನ್ಯ ವಿಪ್ರಾಸಾಅ ರವರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.